# ಬದುಕು ಮಾಯೆಯ ಮಾಟ ಹಕಮಾಟಾ!



■ ಪ್ರವೀಣ ಕುಲಕರ್ಣಿ

ಈ ತಾತನಿಗೆ ಈಗ 88 ವರ್ಷ. ಐದು ದಶಕಗಳ ಹಿಂದೆ ತಮ್ಮ ವಿರುದ್ಧ ಮರಣ ದಂಡನೆ ಶಿಕ್ಷೆಯ ತೀರ್ಪು ಬಂದರೂ ಸಾವಿನ ಕ್ಷಣವನ್ನು ಎದುರು ನೋಡುತ್ತಲೇ ಕಾನೂನು ಸಮರವನ್ನೂ ನಡೆಸುತ್ತಲೇ ಬಂದವರು. ಮರಣದಂಡನೆ ಶಿಕ್ಷೆ ಯಾವುದೇ ಕ್ಷಣದಲ್ಲಿ ಆಗಬಹುದು ಎಂದು ಇಷ್ಟೊಂದು ಸುದೀರ್ಘ ಅವಧಿಯವರೆಗೆ ಆತಂಕದಲ್ಲೇ ಕಳೆದ ಮತ್ತೊಬ್ಬ ವ್ಯಕ್ತಿ ಇಲ್ಲ. ಸತತ ಐವತ್ತು ವರ್ಷಗಳವರೆಗೆ ನಡೆದ ಕಾನೂನು ಸಮರದಲ್ಲಿ ಈ ತಾತ ನಿರಪರಾಧಿ ಎಂದು ಸಾಬೀತಾಗಿ, ಆರೋಪಗಳಿಂದ ಖುಲಾಸೆಗೊಂಡರೇನೋ ನಿಜ. ಆದರೆ, ಆ ಖುಷಿಯನ್ನು ಅನುಭವಿಸಲಾಗದಂತೆ ಅವರೀಗ ವಿಸ್ಮೃತಿ ಆವಸ್ಥೆಗೆ ತಲುಪಿಬಿಟ್ಟಿದ್ದಾರೆ.

ಜಪಾನ್‌ನ ತಾತ ಐವೊ ಹಕಮಾಟಾ ಅವರದು ಮೈನವಿರೇಳಿಸುವಂತಹ ಕಥೆ. ಒಂದೊಮ್ಮೆ ವೃತ್ತಿಪರ ಬಾಕ್ಸರ್ ಆಗಿದ್ದ ಅವರು, ಕ್ರೀಡೆಯಿಂದ 1961ರಲ್ಲಿ ನಿವೃತ್ತರಾದ ಬಳಿಕ ಸೋಯಾಬೀನ್ ಸಂಸ್ಕರಣಾ ಘಟಕವೊಂದರಲ್ಲಿ ಕೆಲಸಕ್ಕೆ ಸೇರಿಕೊಂಡರು. ಪಾಪ, ಅವರ ಈ ಆಯ್ಕೆ ಅವರನ್ನು ಜೀವನಪರ್ಯಂತ ಕತ್ತಲಲ್ಲೇ ಕಳೆಯುವಂತೆ ಮಾಡುತ್ತದೆ ಎಂದೇನೂ ಅವರಿಗೆ ಆಗ ತಿಳಿದಿರಲಿಲ್ಲ. ಹಕಮಾಟಾ ಕೆಲಸಕ್ಕೆ ಸೇರಿ ಆಗಷ್ಟೇ 5 ವರ್ಷಗಳಾಗಿದ್ದವು. ಒಂದುದಿನ, ಅವರ ಸಂಸ್ಥೆಯ ಮಾಲೀಕ, ಅವರ ಪತ್ನಿ ಹಾಗೂ ಇಬ್ಬರು ಮಕ್ಕಳು ಹತ್ಯೆಯಾದ ಸ್ಥಿತಿಯಲ್ಲಿ ಪತ್ತೆಯಾದರು. ಪೊಲೀಸರು ಹಕಮಾಟಾ ಅವರ ಮೇಲೆ ಸಂಶಯ ವ್ಯಕ್ತಪಡಿಸಿದರು. ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ‘ಕೊಲೆ ಮಾಡಿರುವುದಾಗಿ ಹಕಮಾಟಾ ಒಪ್ಪಿಕೊಂಡಿದ್ದಾನೆ. ಆತನ ಪ್ಯಾಂಟಿನ ಮೇಲೆ ರಕ್ತದ ಕಲೆಗಳು ಪತ್ತೆಯಾಗಿವೆ’ ಎಂದು ತನಿಖಾಧಿಕಾರಿಗಳು ಕೋರ್ಟ್‌ಗೆ ವರದಿ ನೀಡಿದರು. ಅದಕ್ಕಿಂತ ಮುಂಚೆ ದಿನಕ್ಕೆ 12 ಗಂಟೆಗಳಂತೆ 23 ದಿನಗಳವರೆಗೆ ಅವರನ್ನು ಸತತವಾಗಿ ವಿಚಾರಣೆಗೆ ಒಳಪಡಿಸಲಾಯಿತು. ತ್ರಿಸದಸ್ಯ ನ್ಯಾಯಪೀಠ 2–1ರ ಬಹುಮತದಿಂದ ಅವರಿಗೆ ಮರಣದಂಡನೆ ವಿಧಿಸಿ ತೀರ್ಪು ನೀಡಿತು (1968). ಹಕಮಾಟಾ ನಿರಪರಾಧಿ ಎಂದು ತೀರ್ಪು ಬರೆದಿದ್ದ ತ್ರಿಸದಸ್ಯ ಪೀಠದ ಇನ್ನೊಬ್ಬ ನ್ಯಾಯಾಧೀಶರು, ಈ ವ್ಯಕ್ತಿ ನಿರಪರಾಧಿ ಎಂದು ಗೊತ್ತಿದ್ದರೂ ನ್ಯಾಯ ಕೊಡಿಸಲು ಸಾಧ್ಯವಾಗಲಿಲ್ಲ ಎಂದು ನೊಂದು, ತಮ್ಮ ಹುದ್ದೆಗೇ ರಾಜೀನಾಮೆ ನೀಡಿಬಿಟ್ಟರು.

ಜೈಲಿನ ಕಂಬಿಗಳ ಹಿಂದೆ, ತಲೆಯ ಮೇಲೆ ನೇಣು ಹಗ್ಗ ತೂಗುತ್ತಿದ್ದರೂ ಹಕಮಾಟಾ ಅಲ್ಲಿ ಕಳೆದಿದ್ದು ಒಂದೆರಡು ವರ್ಷವಲ್ಲ, ಬರೋಬ್ಬರಿ 48 ವರ್ಷ! ಕಾರ್ಮೋಡದಂಚಿನ ಬೆಳ್ಳಿರೇಖೆಗಾಗಿ ಅವರು ಸಾವಧಾನದಿಂದ ಕಾದೇ ಕಾದರು. ತೀರ್ಪಿನ ವಿರುದ್ಧ ಮನವಿ ಸಲ್ಲಿಸಿದ ಹಕಮಾಟಾ, ‘ಪೊಲೀಸರು ನನ್ನಿಂದ ಬಲವಂತವಾಗಿ ಹೇಳಿಕೆ ಪಡೆದಿದ್ದಾರೆಯೇ ಹೊರತು ನಾನು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿಲ್ಲ’ ಎಂದು ಹೇಳಿದರು. ಮೇಲ್ಮನವಿಗಳ ಮೇಲೆ ಮೇಲ್ಮನವಿಗಳು ಸಲ್ಲಿಕೆಯಾದ ತರುವಾಯ ಜಪಾನ್‌ನ ಕೋರ್ಟ್ ಕೊನೆಗೂ ಇವರ ಪ್ರಕರಣದ ಮರು ವಿಚಾರಣೆಗೆ ಒಪ್ಪಿಗೆ ನೀಡಿತು (ಜಪಾನ್‌ನಲ್ಲಿ ಮರಣದಂಡನೆಯಾದ ಪ್ರಕರಣಗಳನ್ನು ಮರು ವಿಚಾರಣೆಗೆ ಕೈಗೆತ್ತಿಕೊಳ್ಳುವುದು ತುಂಬಾ ವಿರಳ). ಆದರೆ, ಹಕಮಾಟಾ ಅವರ ಮೇಲ್ಮನವಿಯ ವಿಚಾರಣೆ ನಡೆಸಿದ ಕೋರ್ಟ್, ಅದನ್ನೂ ತಿರಸ್ಕರಿಸಿಬಿಟ್ಟಿತು. ಜತೆಗೆ ಸುಪ್ರೀಂ ಕೋರ್ಟ್‌ಗೆ ಹೋಗಲು ಅವರಿಗೆ ಒಪ್ಪಿಗೆಯನ್ನೂ ನೀಡಿತು. ಸುಪ್ರೀಂ ಕೋರ್ಟ್ ಸೂಚನೆಯಂತೆ ಮರು ವಿಚಾರಣೆ ನಡೆಸಿದ ಅಧೀನ ಕೋರ್ಟ್ ಹಕಮಾಟಾ ನಿರಪರಾಧಿ ಎಂದು ಕಳೆದ ವಾರ ತೀರ್ಪು ನೀಡಿದೆ. ಹಕಮಾಟಾ ಅವರ ಪ್ಯಾಂಟಿನ ಮೇಲಿದ್ದ ರಕ್ತದ ಕಲೆಗಳ ಡಿಎನ್‌ಎ ಕೊಲೆಗೆ ಈಡಾದ ವ್ಯಕ್ತಿಗಳ ರಕ್ತದ ಕಲೆಗಳ ಡಿಎನ್‌ಎಗೂ ತಾಳೆಯಾಗಿಲ್ಲ. ಅಲ್ಲದೆ, ಸೋಯಾಬೀನ್‌ನ ರಸದ ಟ್ಯಾಂಕ್‌ನಲ್ಲಿ ರಕ್ತದ ಕಣಗಳು ಬಹುಕಾಲ ಕೆಂಪಾಗಿ ಉಳಿಯಲು ಸಾಧ್ಯವಿಲ್ಲ. ಘಟನೆ ನಡೆದು ಎಷ್ಟೋ ವರ್ಷಗಳು ಗತಿಸಿದ ಬಳಿಕ ತನಿಖಾ ತಂಡದಿಂದಲೇ ಟ್ಯಾಂಕ್‌ನಲ್ಲಿ ರಕ್ತದ ಕಣಗಳನ್ನು ಹಾಕಲಾಗಿದೆ ಎಂದು ನ್ಯಾಯಾಧೀಶರು ತೀರ್ಪಿನಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಕೋರ್ಟ್ ತೀರ್ಪು ಹೊರಬೀಳುತ್ತಿದ್ದಂತೆಯೇ ಹಕಮಾಟಾ ಅವರ ಸಹೋದರಿ ಹಿಡೆಕೊ ಹರ್ಷದ ಕಣ್ಣೀರು ಸುರಿಸಿದ್ದರು. ‘ನ್ಯಾಯಾಧೀಶರ ಹೇಳಿಕೆ ನನಗೆ ದೈವೀವಾಣಿಯಂತೆ ಕೇಳಿಸುತ್ತಿದೆ. ನನ್ನ ಸಹೋದರ ನಿರಪರಾಧಿ ಎನ್ನುವುದು ಸಾಬೀತಾಗಿದೆ. ಆತನ ಯೌವನವನ್ನೂ ಬದುಕನ್ನೂ ಕಿತ್ತುಕೊಂಡ ಶಿಕ್ಷೆಯ ವಿರುದ್ಧ, ಅಪರಾಧಿ ಎಂಬ ಪಟ್ಟ ಕಟ್ಟಿದ ವ್ಯವಸ್ಥೆಯ ವಿರುದ್ಧ ಐವತ್ತು ವರ್ಷಗಳವರೆಗೆ ನಡೆಸಿದ ಕಾನೂನುಸಮರ ಸಾರ್ಥಕವಾಗಿದೆ’ ಎಂದು ಹರ್ಷಿಸಿದ್ದರು.

10 ವರ್ಷಗಳ ಹಿಂದೆ ಮರು ವಿಚಾರಣೆಗೆ ಒಪ್ಪಿದ್ದಾಗ ಕೋರ್ಟ್, ಆರೋಗ್ಯಸ್ಥಿತಿ ಬಿಗಡಾಯಿಸಿದ್ದ ಹಕಮಾಟಾ ಅವರನ್ನು ಅಂತಿಮ ತೀರ್ಪಿಗೆ ಬದ್ಧರಾಗಿರುವಂತೆ ಸೂಚಿಸಿ, ಬಿಡುಗಡೆ ಮಾಡಿತ್ತು. ಮುಗ್ಧ ಹಕಮಾಟಾ ಆ ವೇಳೆಗೆ 48 ವರ್ಷ ಜೈಲಿನಲ್ಲಿ ಕಳೆದಿದ್ದರು. ಅಷ್ಟೊಂದು ದೀರ್ಘ ಕಾಲ ಜೈಲಿನಲ್ಲಿ ಕಳೆದ ಕಾರಣ ಅವರ ಮಾನಸಿಕ ಆರೋಗ್ಯ ಸಂಪೂರ್ಣ ಹದಗೆಟ್ಟಿದ್ದು, ಹೊರಜಗತ್ತಿನ ಆಗು–ಹೋಗುಗಳು ಯಾವುವೂ ಅವರ ತಲೆಗೆ ಹೋಗುತ್ತಿಲ್ಲ. ಅವರದೇ ಭಾವಜಗತ್ತಿನಲ್ಲಿ ಅವರಿರುತ್ತಾರೆ. ಹೀಗಾಗಿ ಅವರೀಗ ಕಾನೂನು ಹೋರಾಟದಲ್ಲಿ ಗೆದ್ದರೂ ಸಂಭ್ರಮಿಸುವ ಸ್ಥಿತಿಯಲ್ಲಿ ಇಲ್ಲ. ‘ಕೋರ್ಟ್ ತೀರ್ಪಿನ ಕುರಿತು ಅವನಿಗೆ ಏನೂ ಹೇಳಿಲ್ಲ. ಹೇಳಿದರೂ ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿ ಅವನಿಲ್ಲ. ಆತ ಬದುಕಿದ್ದಾಗಲೇ ನ್ಯಾಯ ಕೊಡಿಸಿದ ಸಂತೃಪ್ತ ಭಾವ ನನಗಿದೆ’ ಎಂದು ಹಿಡೆಕೊ ಹೇಳುತ್ತಾರೆ.

ಮಾಡದ ತಪ್ಪಿಗಾಗಿ ಬದುಕಿನ ಬಹುಭಾಗವನ್ನು ಜೈಲಿನಲ್ಲೇ ಕಳೆದ ಹಕಮಾಟಾ ಹತ್ತು ವರ್ಷಗಳ ಹಿಂದೆ ಬಿಡುಗಡೆಯಾದ ಕ್ಷಣದಿಂದಲೂ ಹೇಗೇ ಹೊರಜಗತ್ತಿನೊಂದಿಗೆ ಸಂಪರ್ಕ ಕಳೆದುಕೊಂಡ ಸ್ಥಿತಿಯಲ್ಲೇ ಇದ್ದರೆ? ‘ಇಲ್ಲ, ಬಿಡುಗಡೆಯಾದ ಆ ದಿನಗಳಲ್ಲಿ ಖಿನ್ನನಾಗಿದ್ದರೂ ಎಲ್ಲರೊಂದಿಗೆ ಸ್ಪಂದಿಸುತ್ತಿದ್ದ. ಎರಡು ಬೆಕ್ಕುಗಳನ್ನು ದತ್ತು ಪಡೆದು ಸಾಕಿ, ಸಂತೋಷಪಟ್ಟಿದ್ದ. ಆದರೆ, ದಿನಗಳು ಕಳೆದಂತೆ ಆತ ಅಂತರ್ಮುಖಿಯಾಗುತ್ತಾ ಹೋದ’ ಎಂದು ಹಿಡೆಕೊ ವಿವರಿಸುತ್ತಾರೆ. ಕೋರ್ಟ್‌ನಿಂದ ನ್ಯಾಯವೇನೋ ಸಿಕ್ಕಿತು, ಆದರೆ ಅದು ಎಷ್ಟೊಂದು ದುಬಾರಿಯಾಗಿತ್ತು? (ಸಹೋದರನ ಅರ್ಧ ಆಯುಷ್ಯವನ್ನೇ ನುಂಗಿಹಾಕಿತು) ಇಷ್ಟೊಂದು ವಿಳಂಬ ನ್ಯಾಯದಾನದಿಂದ ಕೊನೆಗೆ ನಾವು ಗಳಿಸಿದ್ದಾದರೂ ಏನು? ಸಹೋದರ ನಿರಪರಾಧಿ ಎನ್ನುವ ಒಂದು ಸಮಾಧಾನವೊಂದೇ’ ಎಂಬ ಅವರ ಮಾತು ನ್ಯಾಯದಾನ ವ್ಯವಸ್ಥೆಯನ್ನೇ ಪರಾಮರ್ಶೆಗೆ ಒಳಪಡಿಸುವಂತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65